ಓ.ಎಸ್ಃ 47/2022 ಡಿ.ಡಬ್ಲೂ - 1: Manjuladevi

ದಿನಾಂಕಃ 28.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲುಃ ವಾದಿಯ ಪರವಾಗಿ ಶ್ರೀ ಹೆಚ್.ಎಲ್.ಪಿ. ವಕೀಲರಿಂದಃ**

ನಾನು ಗೃಹಿಣಿ. ನಾನು 10ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲೂ ಬರೆಯಲೂ ಚೆನ್ನಾಗಿ ಬರುತ್ತದೆ. ನನಗೆ ಯಾವುದೇ ಪತ್ರ ಕೊಟ್ಟಾಗ ನನ್ನ ಗಂಡ ಓದಿದ ನಂತರ ನಾನು ಸಹಿ ಮಾಡುತ್ತೇನೆ. ಎಲ್ಲಾ ಪತ್ರದ ವ್ಯವಹಾರದಲ್ಲಿ ನನ್ನ ಗಂಡ ಭಾಗಿಯಾಗುತ್ತಾರೆ ಎನ್ನುವುದು ನಿಜ. ಈ ಕೇಸಿನ ಕ್ರಯದ ಕರಾರು ಪತ್ರದಲ್ಲಿ ಬರೆದ ವಿಷಯವನ್ನು ಓದಿ ತಿಳಿದುಕೊಂಡಿದ್ದೇನೆ. ನಿಪಿ-1ರಲ್ಲಿರುವ ಭಾವಚಿತ್ರ ನನ್ನದೇ ಎನ್ನುವುದು ನಿಜ. ನಿಪಿ-1ರಲ್ಲಿ ನಾನು ಸಾಲಕ್ಕಾಗಿ ಹಣ ಪಡೆದುಕೊಂಡಿದ್ದೇನೆ ಎನ್ನುವುದನ್ನು ಬರೆಸಿದ್ದೇನೆ. ನನಗೆ ಕಾನೂನು ಪ್ರಕಾರ ಬಂದ ನೋಟಿಸ್ ಮತ್ತು ವಾದ ಪತ್ರದಲ್ಲಿ ಬರೆದ ವಿಷಯ ಓದಿ ತಿಳಿದುಕೊಂಡಿದ್ದೇನೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರವನ್ನು ನನ್ನ ವಕೀಲರಿಗೆ ಹೇಳಿ ಬರೆಸಿದ್ದೇನೆ ಎನ್ನುವುದು ನಿಜ. ನನ್ನ ಮುಖ್ಯವಿಚಾರಣೆಯನ್ನು ನಾನೇ ಹೇಳಿ ಬರೆಸಿದೆ ಎನ್ನುವುದು ನಿಜ. ನನಗೆ ಕಾನೂನು ಜ್ಞಾನ ಇಲ್ಲ. ಪ್ರತಿವಾದ ಪತ್ರ ಬರೆಸಬೇಕಾದರೆ ಚೆಕ್ಕುಬಂಧಿ ಬರೆಸಲು ತೊಂದರೆ ಇತ್ತಾ ಎಂದರೆ, ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದ ಪತ್ರದಲ್ಲಿ ಚೆಕ್ಕುಬಂಧಿ ಬರೆಸಲು ತೊಂದರೆ ಇತ್ತಾ ಎಂದರೆ, ನನ್ನ ಗಂಡನಿಗೆ ಗೊತ್ತು ಎಂದು ಹೇಳುತ್ತಾರೆ. ವಾದಿ ಕಳುಹಿಸಿದ ನೋಟಿಸ್ ಗೆ ನಾನು ಯಾವುದೇ ಪ್ರತ್ಯುತ್ತರ ಕೊಟ್ಟಿಲ್ಲ. ಅದನ್ನು ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ಕ್ರಯದ ಕರಾರು ಪತ್ರ ಆದ ನಂತರ ಎಲ್ಲಾ ದಾಖಲೆಗಳು ರೆಡಿ ಇದೆ ನೀವು ನೊಂದಾವಣೆಗೆ ಬನ್ನಿ ಎಂದು ನೋಟಿಸ್ ಕೊಟ್ಟಿದ್ದೀರಾ ಎಂದರೆ, ಕ್ರಯದ ಕರಾರು ಆಗಲಿಲ್ಲ, ನಾನು ಭದ್ರತೆಗಾಗಿ ನಿಪಿ-1ನ್ನು ಬರೆದುಕೊಟ್ಟೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-1ರಲ್ಲಿ ಭದ್ರತೆಗಾಗಿ ಎಂಬುದನ್ನು ಬರೆಸಿದ್ದೇನೆ. ನಿಪಿ-1 ಕರಾರು ಪತ್ರವನ್ನು ನನ್ನ ಗಂಡ ಮಂಜುನಾಥ ಸ್ವಾಮಿ ಬರೆಸಿದ್ದಾರೆ ಎನ್ನುವುದು ನಿಜ. ನನ್ನ ಗಂಡ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎನ್ನುವುದು

ನಿಜ. ನಿಪಿ-1ನ್ನು ವಾದಿ ಸೃಷ್ಠಿ ಮಾಡಿದ್ದಲ್ಲ ನಾನೇ ಹೇಳಿ ಬರೆಸಿದ್ದು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.